ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 4/2021

(ಫ್ರಾಸಾ-9 ಚಾಸಾ-15)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 09.06.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರೀನಿವಾಸ್ ಬಿ.ವಿ. |
| ತಂದೆಯ ಹೆಸರು | - | ಲೇಟ್ ವೀರಭದ್ರಪ್ಪ |
| ವಯಸ್ಸು | - | 53 ವರ್ಷ, |
| ಉದ್ಯೋಗ | - | ಪೋಲಿಸ್ ಮುಖ್ಯ ಪೇದೆ,<br>ಚನ್ನರಾಯಪಟ್ಟಣ ಪೋಲಿಸ್ ಠಾಣೆ |
| ವಾಸ | - | ಚನ್ನರಾಯಪಟ್ಟಣ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2019 ರಿಂದ ನಾನು ಚನ್ನರಾಯಪಟ್ಟಣ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ದಿನಾಂಕ 01.10.2020 ರಂದು ರಾತ್ರಿ 08.00 ಘಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರಾಧರವರು ಠಾಣೆಗೆ ಹಾಜರಾಗಿ ನಿಪಿ-1 ರಂತೆ ಲಿಖಿತ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿದೆ. ನಿಪಿ-1(ಬಿ) ನನ್ನ ಸಹಿ ಇರುತ್ತದೆ. ನಿಪಿ-1 ರ ಆಧಾರದ ಮೇರೆಗೆ ನಿಪಿ-8 ರಂತೆ ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿಕೊಂಡು ಪೋಲಿಸ್ ಪೇದೆ 1555 ನಿಂಗಜ್ಜರವರ ಮುಖೇನ ವಿಶೇಷ ನ್ಯಾಯಾಧೀಶರಿಗೆ ಕಳುಹಿಸಿಕೊಟ್ಟೆ. ನಿಪಿ-8(ಎ) ನನ್ನ ಸಹಿ. ನಂತರ ಪ್ರಥಮ ವರ್ತಮಾನ ವರದಿಯನ್ನು ದೊಡ್ಡಬಳ್ಳಾಪುರ ಡಿವೈಎಸ್ಪಿ ರವರಿಗೆ ಮುಂದಿನ ತನಿಖೆಗಾಗಿ ವಹಿಸಿಕೊಟ್ಟೆ

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿಡಿಪಿ ವಕೀಲರಿಂದಃ**

2. ಚಾಸಾ-1 ರವರು ಠಾಣೆಗೆ ದೂರು ಕೊಡಲು ಬಂದಾಗ ಅವರೊಂದಿಗೆ ಪ್ರೇಮ ಅನ್ನುವವರು ಸಹ ಬಂದಿದ್ದರು. ಅವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ಠಾಣೆಗೆ

ಬಂದಿರಲಿಲ್ಲ. ಫಿರ್ಯಾದುದಾರರ ನಿಪಿ-1 ಲಿಖಿತ ದೂರನ್ನು ಠಾಣೆಗೆ ಬರುವಾಗ ತೆಗೆದುಕೊಂಡು ಬಂದಿದ್ದರು ಅದನ್ನು ಎಲ್ಲಿ ತಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಬರೆದಿರುವ ವಿಷಯಗಳನ್ನು ನೋಡಿದಾಗ ಘಟನೆ ದಿಃ29.09.2020 ರಂದು ಆಯಿತು ಎಂದು ನನಗೆ ಗೊತ್ತಾಯಿತು. ದೂರುದಾರರ ಮನೆ ನಮ್ಮ ಠಾಣೆಯಿಂದ ಸುಮಾರು 12 ಕಿಮೀ ದೂರ ಇರಬಹುದು. ಗಲಾಟೆಯಾದ ನಂತರ ವಿಷಯವನ್ನು ಬೇರೆಯವರಿಗೆ ತಿಳಿಸಿದ್ದು ಅವರು ಮಾತನಾಡುತ್ತೇನೆ ಎಂದು ಹೇಳಿದ ಕಾರಣ ತಡವಾಗಿ ಬಂದು ದೂರು ನೀಡಿರುತ್ತೇನೆ ಎಂದು ಚಾಸಾ-1 ರವರು ಹೇಳಿದ್ದರು. ಚಾಸಾ-1 ರವರು ಘಟನೆಯ ವಿಷಯ ಯಾರಿಗೆ ತಿಳಿಸಿದ್ದು ಅವರು ಯಾರೊಂದಿಗೆ ಮಾತನಾಡಿದ್ದರು ಎಂದು ನಾನು ವಿಚಾರಿಸಿಲ್ಲ. ನಾನು ಮತ್ತು ಚಾಸಾ-1 ರವರು ಷರೀಕಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರ.ವ.ವರದಿ ನೊಂದಾಯಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ-1 ರವರು ಠಾಣೆಗೆ ಬಂದು ನಿಪಿ-1 ರಂತೆ ದೂರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೊಹಮ್ಮದ್ ಮುಜೀರ್ ಉಲ್ಲಾ ಸಿ.ಜಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು